ಶ್ರೀ ಜಿ. ವಿ. ಗೌಡ.—ಕೆಲವು ಕಡೆಗಳಲ್ಲಿ ಜೋಳ ಕೊಡುವುದನ್ನು ನಿಲ್ಲಿಸಿದ್ದಾರೆ. ಈ ವಿಚಾರವನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಸ್ವಲ್ಪವಾದರೂ ಕೊಡುವ ವ್ಯವಸ್ಥೆಯನ್ನು ಮಾಡುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಹಾಗೆ ಎಲ್ಲಾದರೂ ತೊಂದರೆ ಇದ್ದರೆ ಅದನ್ನು ಪರಿಶೀಲನೆ ಮಾಡಿಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸರ್ಕಾರದವರು ಇತ್ತೀಚೆಗೆ ಹಳ್ಳಿಗಳನ್ನು ಪೂರ್ತಿಯಾಗಿ ಮರೆತಿಬ್ಬಾರೆಂದು ಕಾಣುತ್ತದೆ. ಏಕೆಂದರೆ ಈಗ ಸುಗ್ಗೀ ಕಾಲ ಅದಕ್ಕೋಸ್ಕರ ಹಳ್ಳಿಗಳಿಗೆ ರೇಷನಿಂಗ್ ಪದ್ಧತಿ ಜಾರಿಗೆ ಕೊಟ್ಟಿಲ್ಲವೆಂದು ಮಂತ್ರಿಗಳು ಹೇಳಿದರು. ಆದರೆ ಸುಗ್ಗಿ ಇಲ್ಲದೇ ಇರುವ ಕಾಲದಲ್ಲಿಯೂ ಇವರು ಹಳ್ಳಿಗಳನ್ನು ನಿರ್ಲಕ್ಷ್ಯದಿಂದ ನೋಡಿರುವುದರಿಂದ, ಅಹಾರ ಮಂತ್ರಿಗಳು ನಿಜವಾಗಿಯೂ ಹಳ್ಳಿಯವರೆ ?

ಶ್ರೀ ಬಿ. ಡಿ. ಜತ್ತಿ.—ನಾನು ಸಂಪೂರ್ಣವಾಗಿ ಹಳ್ಳಿಯವನು, ಮೊದಲನಿಂದಲೂ ಹಳ್ಳಿಗಳಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಇಲ್ಲ. ಆ ರೀತಿಯಲ್ಲಿ ಹಳ್ಳಿಗಳಲ್ಲಿ ಕೊಡುತ್ತಾ ಇಲ್ಲ. ಎಲ್ಲಾದರೂ ತೊಂದರೆ ಇದ್ದರೆ ಅಂತಹ ಕಡೆಗಳಲ್ಲಿ ಮೊದಲನಿಂದಲೂ ಸಹಾಯ ಮಾಡುತ್ತೇವೆ. ಈಗಲೂ ಕೊಡುತ್ತೇವೆ, ಮುಂದೆಯೂ ಕೊಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಧಾರವಾಡ ಜಿಲ್ಲೆಯೊಳಗೆ ಸಮೃದ್ಧಿಯಾಗಿ ಜೋಳ ಇದೆ. ಅದನ್ನು ತಿನ್ನುವ ಜನರು ಜಾಸ್ತಿ ಇದ್ದಾರೆಂದು ಮಂತ್ರಿಗಳು ಹೇಳಿದಮೇಲೆ ಇಷ್ಟೊಂದು ಗೋಧಿಯನ್ನು ಆ ಜಿಲ್ಲೆಗೆ ಏಕೆ ಕೊಟ್ಟಿದಾರೆ ? ಹಾಗೆ ಕೊಡುವಾಗ ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಗೋಧಿಯನ್ನು ಕೊಟ್ಟು ಮಾರ್ಚಿಯಲ್ಲಿ ಕೊಡದೇ ಇರಲು ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಅಲ್ಲಿ ಜೋಳ ಸಮೃದ್ಧಿಯಾಗಿದೆಯೆಂದು ನಾನು ಹೇಳಲಿಲ್ಲ. ಪರಿಸ್ಥಿತಿ ನೆಟ್ಟಗಿದ್ದಾಗ ಗೋಧಿಯನ್ನು ಕೊಟ್ಟಿದೆ. ಯಾವಾಗ ಪರಿಸ್ಥಿತಿ ನೆಟ್ಟಗಿಲ್ಲವೋ ಆಗ ಗೋಧಿಗೆ ಬದಲಾಗಿ ಜೋಳ ಕೊಟ್ಟಿದೆ.

Allotments of Wheat

*Q.—142. Sri C. S. HULKOTI (Mundargi)—

Will the Government be pleased to state :—

(*a*) whether it is a fact that the flour mill owners in Dharwar District are getting their allotted quota of wheat from the Central Government Warehouse Godowns at Avadi or at Bangalore in time without much delay ;

(*b*) whether they have passed any orders to supply wheat to them in preference to fair price shop quota holders ?

(*c*) whether any fixed regular monthly quota of wheat has been allotted to these flour mill owners ;

(*d*) the authorities to recommend and allot wheat quota to the flour mill owners ;

(*e*) whether there are any regulations enacted in this connection ?

A.—Sri B. D. JATTI (Minister for Food).—

(*a*) Consequent on the decision of the Government of India that allotments of wheat to Roller Flour Mills should be made available through the Food Corporation of India, the Corporation will make necessary arrangements to see that the Flour Mills in Dharwar District get their allotments.

(*b*) The Government of India gives separate allotments :

(i) For Roller Flour Mills and

(ii) For distribution among consumers ;

The question of wheat being allotted to Roller Flour Mills in preference to Fair Price Shops does not, therefore, arise.

(*c*) The Government of India determine the allotment of wheat to be given to each Roller Flour Mills and this allotment varies from month to month, depending on various circumstances like the availabil ty of imported wheat, requirements of wheat for issue to consumers through Fair Price Shops, requirements of wheat products in any particular season on account of festivals, etc. No regular monthly quota has, therefore, been fixed by them.

(*d*) The local officers of the Government of India make their recommendations to the Government of India regarding the wheat to be allotted to the various Roller Flour Mills.

(*e*) The Wheat Roller Flour Mills Control Order, 1957 has been promulgated by the Government of India in this behalf.

Sri C. S. HULKOTI.—Whether it is a fact that Flour Mills other than Roller Mills do get a Government quota of foreign wheat ?

† **Sri B. D. JATTI.**—No, Sir.

ಶ್ರೀ ಸಿ ಎಸ್. ಹುಲ್ಕೋಟಿ.—ರೋಲರ್ ಫ್ಲೋರ್ ಮಿಲ್ಸ್ ಮತ್ತು ಫ್ಲೋರ್ ಮಿಲ್ಸ್‌ಗೆ ವಿದೇಶದ ಗೋಧಿಯನ್ನು ಎಲ್ಲಿಂದ ದೊರಕಿಸುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ನನಗೆ ಉತ್ತರ ಹೇಳುವುದಕ್ಕೆ ಬರುವುದಿಲ್ಲ. ಅದರಲ್ಲಿ ಏನಾದರೂ; ತೊಂದರೆ ಇದ್ದರೆ ಸರಿಪಡಿಸೋಣ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಗೋಧಿ ಕೋಟಾ ಕೇಂದ್ರ ಸರ್ಕಾರದಿಂದ ಸಿಗುತ್ತದೋ ಅಥವಾ ಆಹಾರ ಕಾರ್ಪೊರೇಷನ್ನಿಂದ ಸಿಗುತ್ತದೋ ?

ಶ್ರೀ ಬಿ. ಡಿ. ಜತ್ತಿ.—ಅವಕ್ಕೆ ಸ್ಥಳೀಯ ಏಪ್ಪಾಡುಗಳನ್ನು ಮಾಡಿಕೊಂಡಾಗೆ ಕಾಣುತ್ತದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಅವರು ಯಾರು ?

ಶ್ರೀ ಬಿ. ಡಿ. ಜತ್ತಿ.—ಅವರು ನಣ್ಣ ನಣ್ಣ ಫ್ಲೋರ್ ಮಿಲ್ಲಿನವರು.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ವಿದೇಶದ ಗೋಧಿಯನ್ನು ರೋಲರ್ ಫ್ಲೋರ್ ಮಿಲ್ಸಿಗೆ ಕೊಡುವಾಗ ಸಮವಾಗಿ ಹಂಚುತ್ತೀರೋ ಅಥವಾ ಹೆಚ್ಚು ಕಡಿಮೆಯಾಗಿ ಹಂಚುತ್ತೀರೋ ?

ಶ್ರೀ ಬಿ. ಡಿ. ಜತ್ತಿ.—ಈ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಲಕ್ಷಾಂತರ ಆರ್ಡರ್‌ಗಳಿರುತ್ತವೆ. ನಮಗೆ ಎಷ್ಟು ಗೋಧಿ ಸಿಗುತ್ತದೋ ಮತ್ತು ಎಷ್ಟು ಗೋಧಿಯನ್ನು ಹಿಟ್ಟುಮಾಡುವುದಕ್ಕೆ ನಮ್ಮಲ್ಲಿ ಎಷ್ಟೆಷ್ಟು ಹಿಟ್ಟಿನ ಗಿರಣಿಗಳಿವೆಯೋ ಅದನ್ನು ನೋಡಿಕೊಂಡು ಸರ್ಕಾರದವರು ಕೊಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ರೋಲರ್ ಫ್ಲೋರ್ ಮಿಲ್ಸ್ ನವುವಾಗಿ ನಮ್ಮ ಸಂಸ್ಥಾನಕ್ಕೆ ಒದಗಿಸಿರತಕ್ಕ ಗೋಧಿ ಎಷ್ಟು ?

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಪ್ರತ್ಯೇಕವಾದ ಅರಾಟ್‌ಮೆಂಟ್ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಮ್ಮ ಬೆನ್ನು ಹಿಂದೆ ಇರತಕ್ಕ ಕೇಂದ್ರ ಸರ್ಕಾರದ ಸ್ಥಳೀಯ ಅಧಿಕಾರಿಗಳು ರೋಲರ್ ಹಿಟ್ಟಿನ ಗಿರಣಿಗಳಿಗೆ ಗೊತ್ತು ಮಾಡಬೇಕಾಗಿರುವ ಗೋಧಿಯ ಪ್ರಮಾಣದ ಬಗ್ಗೆ ತಮ್ಮ ಶಿಫಾರಸ್ಸುಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆಂದು ಉತ್ತರ ಕೊಟ್ಟಿದ್ದೀರಿ. ಮೈನೂರು ದೇತದಲ್ಲಿರತಕ್ಕ ರೋಲರ್ ಮಿಲ್ಲಿಗೆ ಕೇಂದ್ರ ಸರ್ಕಾರದವರು ಎಷ್ಟು ಗೋಧಿಯನ್ನು ಕೊಡುತ್ತಾರೆಯೋ ಅದನ್ನು ನಮ್ಮ ರಾಜ್ಯಕ್ಕೆ ಕೊಡತಕ್ಕ ಗೋಧಿಯ ಕೋಟಾದಲ್ಲಿ ವಜಾ ಮಾಡುತ್ತಾರೆಯೇ ?

Sri B. D. JATTI.—Normally, allotment of wheat to the flour mills is about 6,000 tonnes per month. But it varies according to the wheat available in the entire country.

ಶ್ರೀ ಸಿ. ಎಸ್. ಹುಲ್ಕೋಟಿ.—ರೋಲರ್ ಹಿಟ್ಟಿನ ಗಿರಣಿಗಳಿಗೆ ನಷ್ಟೈ ಮಾಡತಕ್ಕ ಗೋದಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆಯೇ ಅಥವಾ ಪುಡ್ ಕಾರ್ಪೊರೇಷನ್ನಿನವರು ಕೊಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಫುಡ್ ಕಾರ್ಪೊರೇಷನ್ ಮುಖಾಂತರ ಕೇಂದ್ರ ಸರ್ಕಾರದವರು ನಷ್ಟೈ ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಕೇಂದ್ರ ಸರ್ಕಾರದವರು ರೋಲರ್ ಹಿಟ್ಟಿನ ಗಿರಣಿಗಳಿಗೆ ನಷ್ಟೈ ಮಾಡತಕ್ಕ ಗೋದಿಯನ್ನು ರಾಜ್ಯ ಸರ್ಕಾರದ ಮುಖಾಂತರ ಹಂಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅಂಥಾ ಅವಶ್ಯಕತೆಯೇನೂ ಈಗ ಕಾಣುವುದಿಲ್ಲ. ಮತ್ತು ಈಗ ಇದರಿಂದ ಯಾವ ರೋಲರ್ ಫ್ಲೋರ್ ಮಿಲ್ಲಗೂ ತೊಂದರೆಯಾಗುತ್ತಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ರೋಲರ್ ಫ್ಲೋರ್ ಮಿಲ್ಲುಗಳಿಗೆ ನಷ್ಟೈ ಮಾಡತಕ್ಕ ಗೋದಿಗೆ ಒಂದು ರೇಟು ಮತ್ತು ಬೇರೆಯುವರಿಗೆ ನಷ್ಟೈ ಮಾಡತಕ್ಕ ಗೋದಿಗೇ ಒಂದು ರೇಟನ್ನು ಫಿಕ್ಸ್ ಮಾಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಹಾಗೇನೂ ಇಲ್ಲ. ಒಂದುವೇಳೆ ವ್ಯತ್ಯಾಸ ಮಾಡುತ್ತಾರೆ ಎಂದರೆ ಅದನ್ನು ನಾನು ಎನ್‌ಕ್ವೈರಿ ಮಾಡುತ್ತೇನೆ.

Agencies to purchase Foodgrains.

*Q.—44. Sri C. S. HULKOTI (Mundargi).—

Will the Government be pleased to state :—

(*a*) whether the wholesale and retail agencies have been settled by the Government to purchase food grains produced during the current harvesting season ;

(*b*) if so, which are those agencies ;

(*c*) whether the said agencies possess sufficient funds to purchase the stocks ;

(*d*) whether the Government is giving any financial aid to them and if so, what is the percentage of financial aid ;

(*e*) what arrangements have been made for storing the purchased stocks ;

(*f*) the total percentage of stocks the producer can hold ;

(*g*) whether Government has taken steps to maintain trained and qualified sufficient staff for the purchase of produce of foodgrains ?

A.—Sri B. D. JATTI (Minister for Food).—

(*a*) Yes.

(*b*) The State Government have decided to purchase paddy, jowar, local wheat and maize, through the Food Corporation of India which will undertake this operation through the Co-operative Societies ; but where Co-operatives are not in a position to do so, the purchase operations will be undertaken through Millers and other agents.

(*c*) and (*d*) The Food Corporation of India provide funds for the purchase of foodgrains in Mysore Division. In the remaining divisions, share capital contribution is given to the Co-operative Societies to enable